ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬರುವ ಮೊದಲಂ ಸಂಖ್ಯ ತಾಲ್ಲೂಕಿನಲ್ಲಿ ಲೋಕೋಪಯೋಗಿ ಕಾಮಗಾರಿಗಳಂ

೨೧೫. ಶ್ರೀ ಕೆ. ಕುಶಾಲ (ಸಂಖ್ಯ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭ರ ಏಪ್ರಿಲ್‌ನಿಂದ ೧೯೯೦ರ ಮಾರ್ಚ್ ಕೊನೆಯವರೆಗೆ ಸಂಖ್ಯಾ ತಾಲ್ಲೂಕಿನಲ್ಲಿ ಮಂಜೂರಾದ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ಸಂಖ್ಯೆ ಎಷ್ಟು ? ಮತ್ತು ಅವುಗಳ ಒಟ್ಟು ಮೊಬಲಗು ಎಷ್ಟು ?

ಆ) ಅವುಗಳಲ್ಲಿ ಪೂರ್ಣಗೊಂಡ ರಸ್ತೆಗಳ ಮತ್ತು ಸೇತುವೆಗಳ ಸಂಖ್ಯೆ ಎಷ್ಟು ? ಮತ್ತು ಅವುಗಳಿಗೆ ಖರ್ಚು ಮಾಡಿದ ಒಟ್ಟು ಹಣ ಎಷ್ಟು ?

ಇ) ಅವುಗಳಲ್ಲಿ ಪ್ರಾರಂಭವಾಗದೇ ಇರುವ ರಸ್ತೆಗಳ ಮತ್ತು ಸೇತುವೆಗಳ-ಸಂಖ್ಯೆ ಎಷ್ಟು ? ಮತ್ತು ಅದಕ್ಕೆ ಕಾರಣಗಳೇನು ?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) —

ಅ) ಸಂಖ್ಯ ತಾಲ್ಲೂಕಿನಲ್ಲಿ ಏಪ್ರಿಲ್ ೧೯೮೭ ರಿಂದ ಮಾರ್ಚ್ ೧೯೯೦ ರವರೆಗೆ ಮಂಜೂರಾದ ಕಾಮಗಾರಿಗಳು :

	ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ	ಜಿಲ್ಲಾಪರಿಷತ್ತುಗಳ ವ್ಯಾಪ್ತಿಯಲ್ಲಿ
೧. ರಸ್ತೆಗಳು	೬೨	೧೮
೨. ಸೇತುವೆಗಳು (ಸಿ.ಡಿ. ಕಾಮಗಾರಿ)	೫	೨
೩. ಒಟ್ಟು ಅಂದಾಜು ಮೌಲ್ಯ	ರೂ. ೨೧.೮೭ ಲಕ್ಷಗಳು	ರೂ. ೬೦.೨೦ ಲಕ್ಷಗಳು

ಆ) ಪೂರ್ಣಗೊಂಡ ರಸ್ತೆ ಮತ್ತು ಸೇತುವೆಗಳು :

೧. ರಸ್ತೆ ಕಾಮಗಾರಿಗಳು	೪೨	೨
೨. ಸೇತುವೆಗಳು (ಸಿ.ಡಿ. ಕಾಮಗಾರಿ)	೫ ಪ್ರಗತಿಯಲ್ಲಿವೆ	ಇಲ್ಲ.
೩. ಇದುವರೆವಿಗೆ ಖರ್ಚಾದ ಮೊತ್ತ	ರೂ. ೯.೦೩ ಲಕ್ಷಗಳು	ರೂ. ೧೪.೦೪ ಲಕ್ಷಗಳು

ಇ) ಇದುವರೆವಿಗೆ ಪ್ರಾರಂಭವಾಗದೇ ಇರುವ ರಸ್ತೆ ಮತ್ತು ಸೇತುವೆಗಳು :

೧. ರಸ್ತೆ ಕಾಮಗಾರಿ	೨೦	೧೬
೨. ಸೇತುವೆಗಳು (ಸಿ.ಡಿ. ಕಾಮಗಾರಿ)	—	೧
೩. ಕಾರಣಗಳು	ಕೆಲವು ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಿ ಕೊಡಲಾಗಿದ್ದು ಕಾಮಗಾರಿಗಳನ್ನು ಪ್ರಾರಂಭಿಸಿಲ್ಲ. ಹಾಗೂ ಕೆಲವು ಕಾಮಗಾರಿಗಳು ೧೯೯೦ರ ಪ್ರಾರಂಭದಲ್ಲಿ ಮಂಜೂರಾಗಿವೆ. ಈ ಸಾಲಿನಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.	ಕಾಮಗಾರಿಗಳಿಗೆ ಸಾಕಷ್ಟು ಅನುದಾನ ಇರದಿದ್ದರಿಂದ ಕಾಮಗಾರಿಗಳನ್ನು ಪ್ರಾರಂಭಿಸಿಲ್ಲ.